ಅನುಬಂಧ

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 726(818) |
| ಉತ್ತರಿಸುವ ಸಚಿವರು | : | ಮಾನ್ಯ ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 20-09-2022 |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕೈಮಗ್ಗದಿಂದ ತಯಾರಾದ ವಸ್ತುಗಳನ್ನು ಮಾರಾಟ ಮಾಡಲು ಮತ್ತು ಸಾರ್ವಜನಿಕರು ಬಳಸುವಂತಾಗಲು ಸರ್ಕಾರ ತೆಗೆದುಕೊಂಡಿರುವ ಕ್ರಮ ವೇನು; | ಕೈಮಗ್ಗ ಉತ್ಪನ್ನಗಳನ್ನು ಮಾರಾಟ ಮಾಡಲು ರಾಜ್ಯ ಮಟ್ಟದ ಕೈಮಗ್ಗ ಮೇಳ (ಎಸ್.ಹೆಚ್.ಇ) ಹಾಗೂ ಜಿಲ್ಲಾ ಮಟ್ಟದ ಕೈಮಗ್ಗ ಮೇಳ (ಡಿ.ಎಲ್.ಇ) ಗಳ ಆಯೋಜನೆ ಮೂಲಕ ಅವಕಾಶ ಕಲ್ಪಿಸಲಾಗುತ್ತಿದೆ ಹಾಗೂ ಸಾರ್ವಜನಿಕರನ್ನು ಆಕರ್ಷಿಸಲು ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಗ್ರಾಹಕರಿಗೆ ವರ್ಷ ಪೂರ್ತಿ ಶೇಕಡ 20 ರಿಬೇಟ್ ನೀಡಲಾಗುತ್ತಿದೆ. |
| (ಆ) | ನೇಕಾರರಿಗೆ ಸರ್ಕಾರದಿಂದ ಸಿಗುವ ಸವಲತ್ತುಗಳು, ಸಹಾಯಧನಗಳು ಇತ್ಯಾದಿಗಳ ವಿವರಗಳನ್ನು ನೀಡುವುದು; (ಯಾವ ಆಧಾರದ ಮೇಲೆ ಅವರಿಗೆ ಸವಲತ್ತುಗಳು ದೊರೆಯುತ್ತವೆ) | ನೇಕಾರರಿಗೆ ಸರ್ಕಾರದಿಂದ ಸಿಗುವ ಸವಲತ್ತುಗಳು / ಸಹಾಯಧನಗಳನ್ನು ಈ ಕೆಳಕಂಡ ಯೋಜನೆಗಳ ಮೂಲಕ ಸರ್ಕಾರದ ಮಾರ್ಗಸೂಚಿಯನ್ವಯ ನೀಡಲಾಗುತ್ತಿದೆ:-<br>• ಕೈಮಗ್ಗ ನೇಕಾರರಿಗೆ ನೇಕಾರ ಸಮ್ಮಾನ್ ಯೋಜನೆ.<br>• ಕೈಮಗ್ಗ ವಿಕಾಸ ಯೋಜನೆ-ಕೈಮಗ್ಗ ಹಾಗೂ ಅಗತ್ಯ ಸಲಕರಣೆಗಳನ್ನು ಖರೀದಿಸಲು ಘಟಕದ ವೆಚ್ಚ ಶೇ. 50 ರಷ್ಟು ಸಹಾಯಧನ ಒದಗಿಸುವುದು.<br>• ಕೈಮಗ್ಗಗಳಿಗೆ ಮೋಟರೈಸ್ಡ್ ಜಕಾರ್ಡ್ ಒದಗಿಸುವುದು.<br>• ಕಚ್ಚಾ ನೂಲು ಖರೀದಿಗೆ ರೂ.15/- ಪ್ರತಿ ಕೆ.ಜಿ ಗೆ ಸಹಾಯಧನ.<br>• ಮೃತ ನೇಕಾರರ ಅಂತ್ಯ ಸಂಸ್ಕಾರ ವೆಚ್ಚ ಮರುಪಾವತಿ.<br>• ಸಹಕಾರ ಬ್ಯಾಂಕುಗಳು ನೀಡಿದ ಶೇ.1 ಮತ್ತು ಶೇ.3 ಸಾಲದ ಮೇಲೆ ಬಡ್ಡಿ ಸಹಾಯಧನ.<br>• ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಶೇ.20 ರಿಬೇಟ್ ಯೋಜನೆ.<br>• ಉಳಿಗೆ ನಿಧಿ ಯೋಜನೆಯಡಿ ಸರ್ಕಾರದ ಸಮವಂತಿಕೆ ಹಾಗೂ ಉಳಿಗೆ ನಿಧಿ ಮೇಲಿನ ಬಡ್ಡಿ.<br>• ಉಣ್ಣೆ ವಲಯ ಪುನಶ್ಚೇತನ ಮತ್ತು ಬಲವರ್ಧನೆ ಯೋಜನೆಯಡಿ ಸಹಾಯಧನ.<br><br>ಯೋಜನೆಗಳ ವಿವರಗಳನ್ನು <u>ಅನುಬಂಧ</u>ದಲ್ಲಿ ಒದಗಿಸಿದೆ. |
| (ಇ) | ನೇಕಾರರಿಗೆ ನೂತನ ತಂತ್ರಜ್ಞಾನದ ಕೊರತೆ ಇದ್ದು, ಅದನ್ನು ಸರಿಪಡಿಸಲು ಮತ್ತು ನೂತನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು? | ನೇಕಾರರಿಗೆ ನೂತನ ತಂತ್ರಜ್ಞಾನವುಳ್ಳ ಕೈಮಗ್ಗ ಹಾಗೂ ಕೈಮಗ್ಗ ಸಲಕರಣೆಗಳನ್ನು ಅಳವಡಿಸಲು ಕೈಮಗ್ಗ ವಿಕಾಸ ಯೋಜನೆ ಹಾಗೂ ಕೇಂದ್ರ ಸರ್ಕಾರದ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಕಾರ್ಯಕ್ರಮ(ಎನ್.ಹೆಚ್.ಡಿ.ಪಿ) ಗಳಡಿ ಅವಕಾಶ ಕಲ್ಪಿಸಿಕೊಡಲಾಗಿದೆ. |

**ಸಂಖ್ಯೆ:CI 230 JAKE 2022**

(ಶಂಕರ ಬ ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು

Scanned with CamScanner

# <u>ಅನುಬಂಧ</u>

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 314ಕ್ಕೆ ಮಾಹಿತಿ

1. **ಕೈಮಗ್ಗ ನೇಕಾರರಿಗೆ ನೇಕಾರ ಸಮ್ಮಾನ್ ಯೋಜನೆ**
   ಕೈಮಗ್ಗ ನೇಕಾರಿಕೆ ಹಾಗೂ ಇತರೆ ಕೈಮಗ್ಗ ಚಟುವಟಿಕೆಗಳನ್ನು ನಡೆಸುವ ಕೈಮಗ್ಗ ನೇಕಾರರಿಗೆ "ನೇಕಾರ ಸಮ್ಮಾನ್ ಯೋಜನೆ" ಯ ಮೂಲಕ ರೂ.2,000/- ಗಳ ವಾರ್ಷಿಕ ಆರ್ಥಿಕ ನೆರವನ್ನು ನೇರ ನಗದು ವರ್ಗಾವಣೆ ಮುಖಾಂತರ ನೀಡಲಾಗಿದೆ ಹಾಗೂ ಪ್ರಸಕ್ತ ಸಾಲಿಗೆ ಸದರಿ ಯೋಜನೆಯನ್ನು ವಿಸ್ತರಿಸಿ ತಲಾ ರೂ.2,000/- ಗಳಿಂದ ರೂ.5,000/- ಗಳಿಗೆ ಹೆಚ್ಚಿಸಲಾಗಿದೆ.

2. **ಕೈಮಗ್ಗ ವಿಕಾಸ ಯೋಜನೆ**
   ರಾಜ್ಯದ ಕೈಮಗ್ಗ ವಲಯದಲ್ಲಿ ಕೈಮಗ್ಗಗಳು ಗಣನೀಯವಾಗಿ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಹಾಲಿ ಇರುವ ನೇಕಾರರು ಕೈಮಗ್ಗ ನೇಯ್ಗೆ ವೃತ್ತಿಯನ್ನು ಮುಂದುವರಿಸಿ ಅಭಿವೃದ್ಧಿ ಪಡಿಸಿಕೊಳ್ಳಲು ಹಾಗೂ ಯುವ ನೇಕಾರರನ್ನು ಕೈಮಗ್ಗ ನೇಯ್ಗೆ ವೃತ್ತಿಯೆಡೆಗೆ ಆಕರ್ಷಿಸುವ ಉದ್ದೇಶದಿಂದ ಹತ್ತಿ / ರೇಷ್ಮೆ / ಉಣ್ಣೆ ಕ್ಷೇತ್ರದಲ್ಲಿ ಹೊಸ ಕೈಮಗ್ಗ ಹಾಗೂ ಅಗತ್ಯ ಸಲಕರಣೆಗಳನ್ನು ಖರೀದಿಸಲು ಘಟಕ ವೆಚ್ಚದ ಶೇಕಡ 50 ರಷ್ಟು ಸಹಾಯಧನ ಒದಗಿಸುವುದು.

3. **ಕೈಮಗ್ಗಗಳಿಗೆ ನ್ಯೂಮ್ಯಾಟಿಕ್ / ಮೋಟರೈಸ್‌ಡ್ ಜಕಾರ್ಡ್ ಸಲಕರಣೆಗಳ ಕಿಟ್ ಒದಗಿಸುವುದು.**
   ಪ್ರಸ್ತುತ ಕೈಮಗ್ಗಗಳನ್ನು ಹೊಂದಿರುವ ಘಟಕಗಳಿಗೆ ನೇಕಾರರ ಹೆಚ್ಚಿನ ಪರಿಶ್ರಮವನ್ನು ತಪ್ಪಿಸಿ ಹೆಚ್ಚಿನ ಉತ್ಪಾದನೆ ಹಾಗೂ ಗುಣಮಟ್ಟದ ಉತ್ಪಾದನೆಗೆ ಅನುಕೂಲವಾಗುವಂತೆ **ನ್ಯೂಮ್ಯಾಟಿಕ್ / ಮೋಟರೈಸ್‌ಡ್ ಜಕಾರ್ಡ್** ಸಲಕರಣೆಗಳ ಕಿಟ್ ಒದಗಿಸಲು ಪ್ರತಿ ಘಟಕಕ್ಕೆ ವೆಚ್ಚವಾಗುವ ಮೊತ್ತಕ್ಕೆ ಸರ್ಕಾರದ ವತಿಯಿಂದ ಸಾಮಾನ್ಯ ವರ್ಗದವರಿಗೆ ಶೇ.50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ಒದಗಿಸುವುದು.

4. **ಕಚ್ಚಾಮಾಲು ಖರೀದಿ ಮೇಲೆ ಕೈಮಗ್ಗ ಸಹಕಾರ ಸಂಘಗಳಿಗೆ ಪ್ರತಿ ಕೆ.ಜಿ ಗೆ ರೂ.15/- ರ ಸಹಾಯಧನ ನೀಡುವುದು.**
   ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ ಮುಖಾಂತರ ಕೈಮಗ್ಗ ಸಹಕಾರ ಸಂಘಗಳು ಖರೀದಿಸುವ ಕಚ್ಚಾ ನೂಲಿಗೆ ಪ್ರತಿ ಕೆ.ಜಿ ಗೆ ರೂ.15/- ರ ಸಹಾಯಧನ ನೀಡಲಾಗುವುದು.

5. **ಮೃತ ನೇಕಾರರ (ಕೈಮಗ್ಗ) ಅಂತ್ಯ ಸಂಸ್ಕಾರದ ವೆಚ್ಚ ಮರುಪಾವತಿ**
   ಕೈಮಗ್ಗ ನೇಕಾರರ ಸಹಕಾರಿ ಸಂಘದ ನೇಕಾರ ಸದಸ್ಯರು ಮರಣ ಹೊಂದಿದಲ್ಲಿ ಅಂತಹ ಕುಟುಂಬದ ಸದಸ್ಯರಿಗೆ ರೂ.5,000/- ಗಳನ್ನು ಅಂತ್ಯ ಸಂಸ್ಕಾರದ ವೆಚ್ಚಕ್ಕಾಗಿ ನೀಡಲಾಗುವುದು. ಈ ಹಣವನ್ನು ಮೊದಲು ಸದಸ್ಯತ್ವ ಹೊಂದಿದ ಸಹಕಾರಿ ಸಂಘದವರು ಮರಣ ಹೊಂದಿದ ನೇಕಾರರ ಕುಟುಂಬದವರಿಗೆ ಬಿಡುಗಡೆ ಮಾಡಿ ನಂತರ ಹಣವನ್ನು ಸರ್ಕಾರದಿಂದ ಮರುಸಂದಾಯ ಪಡೆಯಬಹುದು.

6. **ಸಹಕಾರ ಬ್ಯಾಂಕ್‌ಗಳು ನೀಡಿದ 1 % ಮತ್ತು 3% ಸಾಲದ ಮೇಲೆ ಬಡ್ಡಿ ಸಹಾಯಧನ**

ನೇಕಾರರ ಸಹಕಾರ ಸಂಘಗಳು / ಕೃಷಿಯೇತರ ಪತ್ತಿನ ಸಹಕಾರ ಸಂಘಗಳು / ಪಟ್ಟಣ ಸಹಕಾರ ಬ್ಯಾಂಕ್‌ಗಳಿಂದ ರೂ.2.00 ಲಕ್ಷಗಳ ವರೆಗೆ ಶೇಕಡ 1 ರ ಬಡ್ಡಿ ದರದಲ್ಲಿ ಸಾಲ ಹಾಗೂ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳ ವರೆಗೆ ಶೇಕಡ 3 ರ ಬಡ್ಡಿ ದರದಲ್ಲಿ ನೀಡಿದ ಸಾಲಕ್ಕೆ ರಾಜ್ಯ ಸರ್ಕಾರವು ಬಡ್ಡಿ ಸಹಾಯಧನ ನೀಡಲಾಗುವುದು.

7. **ಕೈಮಗ್ಗ ಉತ್ಪನ್ನಗಳ ಮಾರಾಟ ಮೇಲೆ ಶೇ.20 ರಿಬೇಟ್ ಯೋಜನೆ**

2018-19 ನೇ ಸಾಲಿನಿಂದ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕೈಮಗ್ಗ ಮಹಾಮಂಡಳಗಳು ತಮ್ಮ ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಸರ್ಕಾರ ನೀಡುವ ಶೇಕಡಾ 20 ರಿಬೇಟ್ ಅನ್ನು ವರ್ಷದ 365 ದಿನಗಳಿಗೆ (ವರ್ಷ ಪೂರ್ತಿ) ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳಿಗೆ ಶೇಕಡ 20 ರಿಬೇಟ್‌ನ್ನು ರಾಜ್ಯ ಸರ್ಕಾರ ವತಿಯಿಂದ ಮರುಪಾವತಿಸಲಾಗುವುದು.

8. **ಮಿತವ್ಯಯ ನಿಧಿ ಯೋಜನೆ**

ಈ ಯೋಜನೆಯಡಿ ನೇಕಾರರಿಗೆ ಉಳಿತಾಯ ಪ್ರವೃತ್ತಿ ಬೆಳೆಸಿಕೊಳ್ಳಲು ಅನುಕೂಲವಾಗುವಂತೆ ಮಜೂರಿಯಿಂದ ಶೇಕಡ 8 ನ್ನು ಕಟಾಯಿಸಿ ರಾಜ್ಯ ಸರ್ಕಾರದ ಶೇಕಡ 8 ರ ಸಮಚಂದಾ ಸೇರಿಸಿ ಖಜಾನೆಯಲ್ಲಿ ಜಮಾ ಮಾಡಲಾಗುವುದು ಜಮೆಯಾದ ಮೊತ್ತ ಶೇಕಡ 12 ರ ಬಡ್ಡಿಯನು ನೀಡಲಾಗುವುದು. ಈ ಯೋಜನೆಯ ಮೊಬಲಗಿನಡಿ ಫಲಾನುಭವಿಗಳ ಮದುವೆ, ಮನೆ ನಿರ್ಮಾಣ, ವೈದ್ಯಕೀಯ ವೆಚ್ಚ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ಮುಂಗಡವನ್ನು ಪಡೆಯಬಹುದಾಗಿದೆ.

9. **ಉಣ್ಣೆ ವಲಯ ಪುನಶ್ಚೇತನ & ಅಭಿವೃದ್ಧಿ ಯೋಜನೆ**

ರಾಜ್ಯದಲ್ಲಿ ಉಣ್ಣೆ ವಲಯದ ಪುನಶ್ಚೇತನಕ್ಕಾಗಿ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಈ ಕೆಳಕಂಡ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಉಣ್ಣೆ ಸಹಕಾರ ಸಂಘಗಳಿಗೆ ಅನುಷ್ಠಾನಗೊಳಿಸಲಾಗುತ್ತಿದೆ.

- ಉಣ್ಣೆ ಕತ್ತರಿಸುವ ಯಂತ್ರ ಪೂರೈಕೆ
- ಉಣ್ಣೆ ಸಾಗಣಿಕೆ ವಾಹನ ಪೂರೈಕೆ
- ಉಣ್ಣೆ ಸಂಗ್ರಹಣದ ಉಗ್ರಾಣ ಪೂರೈಕೆ
- ಉಣ್ಣೆ ಕತ್ತರಿಸುವ ಟೇಬಲ್, ಜನರೇಟರ್, ಉಗ್ರಾಣದ ಪಿಠೋಪಕರಣ ಹಾಗೂ ಇತರೆ
- ಸುಧಾರಿತ ಕಾರ್ಡಿಂಗ್ ಯಂತ್ರ ಪೂರೈಕೆ
- ಮೆಡ್ಲೇರಿ ಚರಕ ಪೂರೈಕೆ
- ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆ
- ಸಾಮೂಹಿಕ ಸೌಲಭ್ಯ ಕೇಂದ್ರ
- ಕಂಬಳಿ / ಉಣ್ಣೆ ಮಾರುಕಟ್ಟೆ ಸಂಕೀರ್ಣ ಸ್ಥಾಪನೆ

ಜಂಟಿ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ